ಆ) ರೂ. 7,500/– ಗಳಿಗೆ ಮೇಲ್ಪಟ್ಟ ಹಾಗೂ ರೂ. 35,000/– ಗಳವರೆಗಿನ ಮೊತ್ತದ ಬೆಳೆನಾಶಕ್ಕೆ ಶೇಕಡ 50 ರಷ್ಟು ಪರಿಹಾರ ಧನ ಕನಿಷ್ಠ ರೂ. 7,500/– ಮತ್ತು ಗರಿಷ್ಠ ರೂ. 21,250/–

ಇ) ರೂ. 35,000/–ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡ 30 ರಷ್ಟು ಪರಿಹಾರ ಧನ, ಕನಿಷ್ಠ ರೂ. 21,250/– ಮತ್ತು ಗರಿಷ್ಠ ರೂ. 50,000/–

ಜಮಖಂಡಿ ತಾಲ್ಲೂಕಿನ ಹಳ್ಳಿಗಳು

25 (259) ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ (ಜಮಖಂಡಿ):– ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜಮಖಂಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಯ ಹಿನ್ನೀರಿನಿಂದ (519.6 ಮೀ) ಮುಳುಗಡೆಯಾದ ಗ್ರಾಮಗಳು ಎಷ್ಟು;

ಆ) ಇವುಗಳಲ್ಲಿ ಪುನರ್ ವಸತಿಯಾಗದ ಹಳ್ಳಿಗಳು ಯಾವುವು;

ಇ) ಇವುಗಳ ಪುನರ್ ವಸತಿ ಹಾಗೂ ಮುಳುಗಡೆಯಾದ ಜಮೀನುಗಳಿಗೆ ಕೊಡಬೇಕಾದ ಪರಿಹಾರದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–

ಅ) ಜಮಖಂಡಿ ತಾಲ್ಲೂಕಿನಲ್ಲಿ 18 ಗ್ರಾಮಗಳು ಮುಳುಗಡೆಯಾಗಿರುತ್ತದೆ.

ಆ) ಪುನರ್ವಸತಿಯಾಗದ ಹಳ್ಳಿಗಳು ಯಾವುದೂ ಇರುವುದಿಲ್ಲ

ಇ) ಇವುಗಳ ಪುನರ್ವತಿ ಹಾಗೂ ಮುಳುಗಡೆಯಾದ ಜಮೀನಿಗಳಿಗೆ ಪರಿಹಾರ ಧನ ನೀಡಲಾಗಿರುತ್ತದೆ.

ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಜಮೀನು ಹಸ್ತಾಂತರ

30 (68) ಶ್ರೀ ಕುಮಾರ ಸ್ವಾಮಿ ಕೆ.ಜಿ.(ಶಿವಮೊಗ್ಗ ಗ್ರಾಮಾಂತರ)):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸರ್ಕಾರದ ಆದೇಶ ಆರ್‌ಡಿ 32 ಎಲ್‌ಎಡಿ 62 ದಿನಾಂಕ 1–8–1963ರ ರೀತ್ಯಾ ಕಳೆದ ಮೂರು ವರ್ಷಗಳಿಂದ ನವೆಂಬರ್ 2011 ರವರೆಗೆ ಶಿವಮೊಗ್ಗ ಜಿಲ್ಲೆಯ

ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕುಗಳು ಹಾಗೂ ಬೆಂಗಳೂರು ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ರಾಮನಗರ ಜಿಲ್ಲೆಯ ರಾಮನಗರ ತಾಲ್ಲೂಕುಗಳಲ್ಲಿ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಹಾಗೂ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಿದ/ವರ್ಗಾಯಿಸಿದ. ಜಮೀನಿನ ವಿಸ್ತೀರ್ಣವೆಷ್ಟು (ಗ್ರಾಮವಾರು, ಸರ್ವೆ ನಂಬರ್‌ವಾರು ವಿಸ್ತೀರ್ಣ ವಿವರ ಒದಗಿಸುವುದು)

ಆ) ಮೇಲ್ಕಂಡ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳಿಗೆ ಪರಸ್ಪರ ವರ್ಗಾಯಿಸಲಾದ ಎಷ್ಟು ಜಮೀನುಗಳಲ್ಲಿ ಜಂಟಿ ಸರ್ವೆಮಾಡಿ ಹದ್ದುಬಸ್ತು ಮಾಡಿ ಗುರುತಿಸಲಾಗಿದೆ ಹಾಗೂ ಕಂದಾಯ ಇಲಾಖೆ ದಾಖಲೆಗಳಲ್ಲಿ ಹಕ್ಕು ಬದಲಾವಣೆ ಮಾಡಿ ದುರಸ್ತಿ ಮಾಡಲಾಗಿದೆ.

ಇ) ಮೇಲ್ಕಂಡ ಜಮೀನುಗಳಲ್ಲಿ ಎಷ್ಟು ವಿಸ್ತೀರ್ಣ ಅನಧಿಕೃತ ಸಾಗುವಳಿ, ಒತ್ತುವರಿ ಸರ್ಕಾರಿ ಜಮೀನಿನಲ್ಲಿ ಅಕ್ರಮ ದಾಖಲೆಗಳ ಸೃಷ್ಟಿಸಿ ಖಾತೆ ಮಾಡಿರುವ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. (ವಿವರ ಒದಗಿಸುವುದು)

ಶ್ರೀ ಸಿ. ಪಿ. ಯೋಗೇಶ್ವರ (ಅರಣ್ಯ ಸಚಿವರು):–

ಅ) ಸರ್ಕಾರದ ಆದೇಶ ಆರ್.ಡಿ. 32 ಎಲ್.ಎ.ಡಿ 62 ದಿನಾಂಕ 1–8–1963ರ ರೀತ್ಯಾ ಕಳೆದ ಮೂರು ವರ್ಷಗಳಿಂದ ಈ ವರೆಗೆ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಹಾಗೂ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಯಾವುದೇ ಜಮೀನು ಹಸ್ತಾಂತರಿಸಿ ವರ್ಗಾಯಿಸಿರುವುದಿಲ್ಲ.

ಬೆಂಗಳೂರು ನಗರ ವಿಭಾಗದ ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಯಾವುದೇ ಅರಣ್ಯ ಭೂಮಿಯನ್ನು ವರ್ಗಾಯಿಸಿರುವುದಿಲ್ಲ.

ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ, ಬರುವ ತಾಲ್ಲೂಕುಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಯಾವುದೇ ಅರಣ್ಯ ಭೂಮಿಯನ್ನು ವರ್ಗಾಯಿಸಿರುವುದಿಲ್ಲ. ಆದರೆ 1980ರ ಅರಣ್ಯ ಸಂರಕ್ಷಣಾ ಕಾಯ್ದೆ ಅನ್ವಯ ಕೇಂದ್ರ ಸರ್ಕಾರದ ಅನುಮತಿಯ ನಂತರ ಮಾಗಡಿ ಮತ್ತು ರಾಮನಗರ,

ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಮತ್ತು ವಿದ್ಯುತ್ ಉಪ ಕೇಂದ್ರ ಸ್ಥಾಪನೆಗಾಗಿ ಅರಣ್ಯ ಭೂಮಿಯನ್ನು ಜಿಲ್ಲಾ ಪಂಚಾಯತ್ ರಾಮನಗರ ಮತ್ತು ಕೆ.ಪಿ.ಟಿ..ಸಿ.ಎಲ್. ರವರಿಗೆ ವಹಿಸಿಕೊಡಲಾಗಿದೆ.

ಆ) ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಹಾಗೂ ಅದೇ ರೀತಿ ಬೆಂಗಳೂರು ನಗರ ವಿಭಾಗದ ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯಲ್ಲಿ ವರ್ಗಾಯಿಸಲಾದ ಜಮೀನು ಯಾವುದು ಇರುವುದಿಲ್ಲ ಆದರೆ ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳಲಿ ಮೇಲ್ಕಂಡ 2 ಪ್ರಕರಣಗಳಲ್ಲಿ ಬಿಡುಗಡೆ ಮಾಡಲಾದ ಅರಣ್ಯ ಭೂಮಿಯನ್ನು ಸರ್ವೆ ಮಾಡಿ ಹದ್ದುಬಸ್ತು ಮಾಡಲಾಗಿದೆ.

ಇ) ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಹಾಗೂ ಅದೇ ರೀತಿ ಬೆಂಗಳೂರು ನಗರ ವಿಭಾಗದ ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯಲ್ಲಿ ಅನಧಿಕೃತ ಸಾಗುವಳಿ, ಒತ್ತುವರಿ ಸರ್ಕಾರಿ ಜಮೀನಿನಲ್ಲಿ ಅಕ್ರಮ ದಾಖಲೆಗಳ ಸೃಷ್ಟಿಸಿ ಖಾತೆ ಮಾಡಿರುವ ಪ್ರಕರಣಗಳು ಯಾವುದು ಇರುವುದಿಲ್ಲ ಆದರೆ ಬಿಡುಗಡೆ ಮಾಡಲಾದ ಅರಣ್ಯ ಭೂಮಿಗಳಲ್ಲಿ ಮತ್ತು ಕಂದಾಯ ಇಲಾಖೆಯಿಂದ ವರ್ಗಾವಣೆಯಾದ ಚಿಮನೂರು ಸ.ನಂ. 254ರಲ್ಲಿ ಅತಿಕ್ರಮಣವಾಗಿರುವುದಿಲ್ಲ.

ಶೆಟ್ಟಿಹಳ್ಳಿ ಅಭಯಾರಣ್ಯ

31 (69) ಶ್ರೀ ಕುಮಾರ ಸ್ವಾಮಿ ಕೆ. ಜಿ. (ಶಿವಮೊಗ್ಗ ಗ್ರಾಮಾಂತರ):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಯಮದ ವತಿಯಿಂದ ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೆ ಮಾಡಲಾದ ನೆಡುತೋಪು, ನರ್ಸರಿ ಅಭಿವೃದ್ಧಿ ಕಾರ್ಯಗಳ ವಿವರವೇನು (ತಾಲ್ಲೂಕುವಾರು, ಗ್ರಾಮವಾರು, ಸರ್ವೇ ನಂಬರ್‌ವಾರು ವಿವರಿಸುವುದು ಪ್ರತಿ ಬಾಬ್ತಿಗೆ ಮಾಡಲಾದ ವೆಚ್ಚವೆಷ್ಟು):–

ಆ) ಮೇಲ್ಕಂಡ ಅವಧಿಯಲ್ಲಿ ನಿಗಮದಿಂದ ಅರಣ್ಯ ಉತ್ಪನ್ನ ಆಧಾರಿತ ಕೈಗಾರಿಕೆಗಳಿಗೆ ಸರಬರಾಜು ಮಾಡಿದ ಕಚ್ಚಾ ಮಾಲಿನ ವಿವರ ಮಾರಾಟದಿಂದ ಬಂದ ಮೊಬಲಗು, ಈ ಮೊಬಲು ಪಾವತಿಸಿದ ಕೈಗಾರಿಕಾ ಸಂಸ್ಥೆಗಳ ವಿಳಾಸ ಇತರೆ ಮಾಹಿತಿಯೊಂದಿಗೆ ವಿವರ ಒದಗಿಸುವುದು.